ಪ್ರಸಿದ್ಧ ಕವಯಿತ್ರಿ ಹಾಗೂ ಕಾದಂಬರಿಕಾರ್ತಿ ಅಮೃತಾ ಪ್ರೀತಂ (1919–2005)ಪಂಜಾಬಿ ಮತ್ತು ಹಿಂದಿ ಭಾಷೆಗಳಲ್ಲಿ ಸಾಹಿತ್ಯ ರಚನೆ ಮಾಡಿದವರು.ಪಂಜಾಬಿ ಸಾಹಿತ್ಯ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿದವರು.ಅವರ ಕಥೆ,ಕಾದಂಬರಿ,ಕವಿತೆಗಳು ದೇಶದ ಅನೇಕ ಭಾಷೆಗಳಿಗೆ ಅನುವಾದಗೊಂಡಿವೆ. ದೇಶವಿಭಜನೆಯ ಸಂದರ್ಭಕ್ಕೆ ಸಾಕ್ಷಿಯಾಗಿದ್ದ ಅವರು ಆ ಹೊತ್ತಿನ ನೋವನ್ನು ತಮ್ಮ ಸಾಹಿತ್ಯ ಕೃತಿಗಳ ಮೂಲಕ ಅಭಿವ್ಯಕ್ತಿಗೊಳಿಸಿದರು.ಭಾರತೀಯ ಜ್ಞಾನಪೀಠ, ಸಾಹಿತ್ಯ ಅಕಾಡೆಮಿ ಪ್ರಶಸ್ತಿ,ಪದ್ಮಶ್ರೀ ಪುರಸ್ಕಾರಗಳು ಅವರಿಗೆ ಸಂದಿವೆ.

ಅವಳು ಮಲಗುವ ಕೋಣೆಗೇನೋ ಹೋದಳು. ಆದರೆ ಎಂಥದೋ ಅಸಮಂಜಸದಲ್ಲಿ ಎಷ್ಟೋ ಹೊತ್ತು ನಿಂತೇ ಇದ್ದಳು. ತಾನೇ ಈ ಎರಡು ರಾತ್ರಿ ನಡುಮನೆಯಲ್ಲಿ ಅತಿಥಿಯಂತೆ ಮಲಗಬೇಕಿತ್ತು. ಇದು ಅಮ್ಮನ ಕೋಣೆ, ನ್ಯಾಯವಾಗಿ ಅಮ್ಮನೇ ಮಲಗಿಕೋಬೇಕಿತ್ತು... ತಲೆತುಂಬಾ ಏನೇನೋ ಯೋಚನೆಗಳು ಅವಳನ್ನು ಮುತ್ತಿದ್ದವು.

ಪ್ರತಿ ಮನೆಯ ಮಲಗುವ ಕೋಣೆಯ ಪಲ್ಲಂಗದಲ್ಲಿ, ಹಾಸಿಗೆಯಲ್ಲಿ, ಹಾಗೂ ಕಪಾಟಿನಲ್ಲಿ ವಿಲಕ್ಷಣವಾದ ಒಂದು ಪರಿಚಿತ ಗಂಧವಿರುತ್ತದೆ. ಅವಳು ಮೂಗರಳಿಸಿ ದೀರ್ಘ ಶ್ವಾಸವನ್ನೆಳೆದುಕೊಂಡು ಆ ಗಂಧವನ್ನು ತನ್ನೊಳಗೆ ಹೀರಿಕೊಂಡಳು. ಮರುಕ್ಷಣವೇ ತನ್ನದೇ ಉಸಿರಿಗೆ ಬೆಚ್ಚಿದವಳಂತೆ ಶ್ವಾಸ ಬಿಗಿಹಿಡಿದಳು.

ಪಕ್ಕದ ಕೋಣೆ ಅವನದು. ನಿಶ್ಶಬ್ದ ಆವರಿಸಿತ್ತು. ಸ್ವಲ್ಪ ಹೊತ್ತಿನ ಮೊದಲು ಅವನು ತಲೆನೋವೆಂದು ಮಾತ್ರೆ ನುಂಗಿದ್ದ. ಈಗ ನಿದ್ದೆ ಹತ್ತಿರಬಹುದು. ಪಕ್ಕದ ಕೋಣೆಗೂ ತನ್ನದೇ ಆದ ಒಂದು ಗಂಧವಿರುತ್ತದಲ್ಲಾ, ಅವಳಿಗೆ ಆ ಗಂಧವನ್ನು ತನ್ನ ಪುಪ್ಪುಸದೊಳಗೆ ಹೀರಿಕೊಳ್ಳಬೇಕೆನಿಸಿತು ಆ ಕ್ಷಣವೇ. ಆದರೆ ಉಸಿರಾಟದನ್ನೇ ಮರೆತವಳಂತೆ ನಿಂತೇ ಇದ್ದಳು.

ಕಪಾಟಿನ ಕೆಳಗೆ ನೆಲದ ಮೇಲೆ ಬಿದ್ದುಕೊಂಡ ತನ್ನ ಸೂಟ್‌ಕೇಸ್ ಕಡೆ ಗಮನಹೋಗಿ ವಿಷಾದದ ಸಣ್ಣ ನಗುವೊಂದು ಅವಳ ತುಟಿಗಳ ಮೇಲೆ ಹಾದುಹೋಯಿತು. ಇದು ಬೇರೆ ಕೇಡು, ಈ ಸೂಟ್‌ಕೇಸ್ ಇಡೀ ರಾತ್ರಿ ನನ್ನ ದಿವಾಳಿತನವನ್ನು ನೆನಪಿಸುತ್ತಲೇ ಇರುತ್ತದಿನ್ನು.

ಅವಳು ಸೂಟ್‌ಕೇಸನ್ನು ನೋಡುತ್ತಲೇ.... ತೀರಾ ದಣಿದವಳಂತೆ ಹಾಸಿಗೆಯ ಮೇಲುರುಳಿ ದಿಂಬಿನ ಮೇಲೆ ತಲೆಯಿಟ್ಟದ್ದಷ್ಟೇ ನೆನಪು. ಯಾವಾಗಲೋ ನಿದಿರಾದೇವಿ ಆವರಿಸಿಕೊಂಡುಬಿಟ್ಟಿದ್ದಳು. ಬೆಳಗ್ಗೆ ಕಣ್ಣುಬಿಟ್ಟಾಗ ಹೊತ್ತೇರಿತ್ತು. ನಡುಮನೆಯಲ್ಲಿ ರಾತ್ರಿ ಭೋಜನಕೂಟದ ತಯಾರಿ ನಡೆದಿತ್ತು.

ಆವಳು ಎವೆ ಪಿಳುಕಿಸದೇ ಕಣ್ಣರಳಿಸಿ ನೋಡುತ್ತಲೇ ಇದ್ದಳು – ಅವನು ನಡುಮನೆಯ ಬಾಗಿಲಲ್ಲಿ ನಿಂತಿದ್ದ. ನೀಲಿ ಬಣ್ಣದ ಚೌಕಳಿ ಚೌಕಳಿಯ ರಾತ್ರಿಯುಡುಗೆ ತೊಟ್ಟಿದ್ದ. ಅವಳೆಂದೂ ಹೀಗೆ ಅವನನ್ನು ರಾತ್ರಿಯುಡುಪಿನಲ್ಲಿ ನೋಡಿರಲಿಲ್ಲ. ಸದಾ ಹಗಲಿನಲ್ಲೇ ಕಂಡಿದ್ದಳು. ರಸ್ತೆಯ ಮೇಲೆ, ರಸ್ತೆಯಂಚಿನಲ್ಲಿ, ಯಾವುದೋ ಕೆಫೆಯಲ್ಲೋ, ಹೊಟೇಲಿನಲ್ಲೋ, ಇಲ್ಲ ಸರಕಾರಿ ಆಯೋಜಿತ ಯಾವುದಾದರೂ ಮೀಟಿಂಗಿನಲ್ಲಿ. ಈ ರೂಪಿನಲ್ಲಿ ಅವನು ಹೊಸದಾಗಿ ಕಂಡ. ಅವನ ಈ ಹೊಸರೂಪು ಕಣ್ಣಿನಲ್ಲಿ ಅಚ್ಚೊತ್ತಿಕೊಂಡಿತು.

ಅವಳೂ ರಾತ್ರಿಯುಡುಪಿನಲ್ಲೇ ಇದ್ದಳು. ಆದರೆ ನಡುಮನೆಗೆ ಬರುವವರೆಗೆ ಅದವಳ ಗಮನಕ್ಕೇ ಬರಲಿಲ್ಲ. ಈಗ ಫಕ್ಕನೇ ಅರಿವಾಗಿ ಮುಜುಗರವಾಯ್ತು. ಸಾಧಾರಣವಾದುದು ಅಸಾಧಾರಣವಾಗುತ್ತಿರುವಂತೆ.....

ನಡುಮನೆಯಲ್ಲಿ ನಿಂತಿದ್ದ ಅವನು ಅವಳು ಬರುವುದನ್ನು ಗಮನಿಸಿ ಹೇಳಿದ- 'ಇಗೋ ಇವೆರಡೂ ಸೋಫಾಗಳನ್ನು ಹೀಗೆ ಒಂದೇ ಬದಿಗೆ ಉದ್ದುದ್ದಕ್ಕೆ ಇಟ್ಟರೆ ಮಧ್ಯ ಇದೆಲ್ಲ ಖಾಲಿ ಜಾಗ ಸಿಗುತ್ತದಲ್ಲವಾ?' ಅವಳು ಸೋಫಾಗಳನ್ನು ಸರಿಸಿಡಲು ಅವನಿಗೆ ನೆರವಾದಳು. ಸಣ್ಣ ಮೇಜನ್ನು ಎರಡು ಖುರ್ಚಿಗಳ ನಡುವೆ ವ್ಯವಸ್ಥಿತವಾಗಿಟ್ಟಳು. ಅಡುಗೆಮನೆಯಿಂದ ಅಮ್ಮ ಕರೆದಾಗ ಓಡಿಹೋಗಿ ಅವನಿಗಾಗಿ ಚಹಾ ತಂದು ಮೇಜಿನ ಮೇಲಿಟ್ಟಳು.

ಚಹಾ ಕುಡಿದು ಅವನೆಂದ – 'ನಡೆ